**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂಃ ನ್ಯಾಯಾಲಯ, ಮದ್ದೂರು.**

**ಸಿ.ಸಿ.137/2020**

| | | |
|---|---|---|
| ಸಾಕ್ಷಿದಾರರ ಹೆಸರು | - ಭಾವನ | ಚಾ ಸಾ -4 |
| ತಂದೆಯ ಹೆಸರು | - ಚಂದ್ರು | ಪ್ರಾ ಸಾ -5 |
| ವಯಸ್ಸು | - 24 ವರ್ಷ | |
| ಉದ್ಯೋಗ | - ವಿದ್ಯಾರ್ಥಿನಿ | |
| ವಾಸ ಸ್ಥಳ | - ದಾಸೇಗೌಡನಕೊಪ್ಪಲು | |

ದಿನಾಂಕಃ 24.01.2024 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ:ಅಭಿಯೋಜನೆಯ ಪರಃ ಎಪಿಪಿ ಯವರಿಂದ:**

ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿರುತ್ತೇನೆ.

ದಿ.12.09.2018 ರಂದು ನಾನು ಬೆಂಗಳೂರಿನಿಂದ ಮಂಡ್ಯಕ್ಕೆ ಕೆ ಎಸ್ ಅರ್ ಟಿ ಸಿ ಬಸ್ಸು ಕೆಎ-09-ಎಫ್-5180 ನಲ್ಲಿ ಹೋಗುತ್ತಿದ್ದೇನು. ನಾನು ಮುಂದಿನ ಸೀಟಿನಲ್ಲಿ ಕುಳಿತಿದ್ದೇನು. ಸಂಜೆ 6.00 ಗಂಟೆ ಸಮಯದಲ್ಲಿ ಗೆಜ್ಜಲಗೆರೆ ಕೈಗಾರಿಕಾ ಪ್ರದೇಶದ ಬಳಿ ನಿಂತಿದ್ದ ಖಾಸಗೀ ಬಸ್ಸಿಗೆ ನಮ್ಮ ಬಸ್ಸು ಸ್ವಲ್ಪ ಜೋರಾಗಿ ಚಾಲನೆ ಮಾಡಿಕೊಂಡು ಹೋಗಿ ಡಿಕ್ಕಿ ಮಾಡಿರುತ್ತದೆ. ಮುಂದೆ ಇದ್ದ ಖಾಸಗೀ ಬಸ್ಸಿನ ಗಾಜಿನ ಚೂರುಗಳು ನನ್ನ ಮೇಲೆ ಬಿದ್ದು ತಲೆಗೆ ಮುಖಕ್ಕೆ ಏಟಾಗಿರುತ್ತದೆ. ಬಸ್ಸಿನಲ್ಲಿದ್ದ ಸ್ವಲ್ಪ ಜನರಿಗೆ ಏಟಾಗಿರುತ್ತದೆ.

ನಾನು ಮಂಡ್ಯ ಅಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ. ಪೊಲೀಸರಿಗೆ ಹೇಳಿಕೆ ನೀಡಿರುತ್ತೆನೆ. ಈಗ ನ್ಯಾಯಾಲಯದ ಮುಂದಿರುವ ಆರೋಪಿಯೇ ಸದರಿ ದಿನ ಬಸ್ಸನ್ನು ಚಾಲನೆ ಮಾಡುತ್ತಿದ್ದರು.

**(ಈ ಹಂತದಲ್ಲಿ ಮಾನ್ಯ ಎ ಪಿ ಪಿ ಯವರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಭಾಗಶಃ ಸಾಕ್ಷಿಯನ್ನಾಗಿ ಪರಿಗಣಿಸಲು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು.)**

<u>**ಪಾಟೀ ಸವಾಲುಃ ಮಾನ್ಯ ಎ ಪಿ ಪಿ ಯವರಿಂದಃ**</u>

ಕೆಎ-51-3333 ಖಾಸಗೀ ಬಸ್ಸಿನ ನಂಬರ್ ಅಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

<u>**ಪಾಟೀ ಸವಾಲುಃ ಆರೋಪಿತರ ಪರ ಮಾನ್ಯ ಶ್ರೀ. ಎಂ ಎಂ ಎಂ ವಕೀಲರಿಂದಃ**</u>

ಸದರಿ ದಿನ ಮಧ್ಯಾಹ್ನ 3.30 ಗಂಟೆಗೆ ಬಸ್ಸನ್ನು ಹತ್ತಿರುತ್ತೇನೆ. ಮದ್ದೂರಿಗೆ ಬಂದಾಗ ಸಂಜೆ ಸುಮಾರು 6.00 ಗಂಟೆಯಾಗಿತ್ತು. ಬಸ್ಸಿನ ಚಾಲಕ ಬೆಂಗಳೂರಿನಿಂದ ಮದ್ದೂರಿನವರೆಗೂ ಮಿತ ವೇಗದಲ್ಲಿ ಬಂದಿರುತ್ತಾರೆ ಎಂದರೆ ಸರಿಯಲ್ಲ, ವೇಗವಾಗಿ ಬಂದಿರುತ್ತಾರೆ, ಎಷ್ಟು ವೇಗ ಎಂದು ಹೇಳಲು ಆಗುವುದಿಲ್ಲ. ನಾನು ಮಲಗಿದ್ದೇನು, ಎಚ್ಚರವವಾದ ತಕ್ಷಣ ಬಸ್ಸಿಗೆ ಡಿಕ್ಕಿಯಾಗಿರುತ್ತದೆ. ನಾನು ಮೊದಲನೇ ಸೀಟಿನಲ್ಲಿ ಕುಳಿತಿದದ ಕಾರಣ ಬಸ್ಸನ್ನು ಹತ್ತಿರದಿಂದ ನೋಡಿರುತ್ತೆನೆ. ಸದರಿ ಖಾಸಗೀ ಬಸ್ಸು ನಿಂತಿತ್ತು, ಚಾಲನೆಯಲ್ಲಿರಲಿಲ್ಲ. ಖಾಸಗೀ ಬಸ್ಸು ರಸ್ತೆಯ ಮೇಲೆ ಇತ್ತೋ, ಫುಟ್ ಪಾತಿನ ಮೇಲೆ ಇತ್ತೋ ಎಂದು ನೆನಪಿಲ್ಲ ನಿಂತಿತ್ತು. ಅಪಘಾತವಾದ ಸಮಯದಲ್ಲಿ ಗಾರ್ಮೆಂಟ್ಸ್ ಫ್ಯಾಕ್ಟರಿ ಬಿಟ್ಟಿದ್ದು ಜನರು ರಸ್ತೆ ದಾಟುತ್ತಿದ್ದರು ಎಂದರೆ ನನಗೆ ನೆನಪಿಲ್ಲ. ಖಾಸಗೀ ಬಸ್ಸಿಗೆ ಜನರು ಹತ್ತಿಕೊಳ್ಳುತ್ತಿದ್ದರೋ ಇಲ್ಲವೋ ನಾನು ನೋಡಿರುವುದಿಲ್ಲ.

ಫ್ಯಾಕ್ಟರಿಯಿಂದ ಬಂದ ಜನರು ಖಾಸಗೀ ಬಸ್ಸನ್ನು ಹತ್ತಲು ಕೈ ಅಡ್ಡ ಹಾಕಿದ ಕಾರಣ ಸದರಿ ಬಸ್ಸು ಜನರನ್ನು ಹತ್ತಿಸಿಕೊಳ್ಳಲು ಯಾವುದೇ ಸೂಚನೆ ನೀಡದೇ ತಕ್ಷಣ ಬ್ರೇಕ್ ಹಾಕಿದ ಕಾರಣ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ಆಗ ಆರೋಪಿಯು ಅದರಿಂದ ತಪ್ಪಿಸಿಕೊಳ್ಳಲು ತಿರುಗಿಸಿದಾಗ ಕೆ ಎಸ್ ಅರ್ ಟಿ ಸಿ ಬಸ್ಸಿನ ಎಡಭಾಗ ಸದರಿ ಖಾಸಗೀ ಬಸ್ಸಿನ ಬಲಭಾಗದ ಹಿಂಭಾಗಕ್ಕೆ ಸ್ವಲ್ಪ ತಗಲಿರುತ್ತದೆ ಎಂದರೆ ಸರಿಯಲ್ಲ. ಸದರಿ ದಿನ ಬೇರೆ ಬೇರೆ ಯಾವ ವಾಹನಗಳ ನಡುವೆ ಅಪಘಾತವಾಗಿದೆ ಎಂದು ನನಗೆ ಗೊತ್ತಿಲ್ಲ. ಬಸ್ಸುಗಳಿಗೆ ಅಪಘಾತವಾದ ವಿಚಾರ ಹೊರತು ಪಡಿಸಿ ನನಗೆ ಬೇರೆ ಅಪಘಾತದ ಬಗ್ಗೆ ಗೊತ್ತಿಲ್ಲ.

ಅಪಘಾತವಾದ ದಿನದಂದೇ ಹೇಳಿಕೆ ನೀಡಿರುತ್ತೇನೆ. ಪೊಲೀಸರು ನನ್ನ ಯಾವುದೇ ಹೇಳಿಕೆ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ, ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯ ತಪ್ಪಿನಿಂದ

ಅಪಘಾತವಾಗಿರುವುದಿಲ್ಲ, ಖಾಸಗೀ ಬಸ್ಸಿನ ಚಾಲಕನ ತಪ್ಪಿನಿಂದ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ.

ನನ್ನ ಸಹ ಪ್ರಯಾಣಿಕರು ಕೆ ಎಸ್ ಅರ್ ಟಿ ಸಿ ವಿರುದ್ದ ಪರಿಹಾರ ಕೋರಿ ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ಸರಿ. ಖಾಸಗೀ ಬಸ್ಸಿನ ವಿರುದ್ದ ಪ್ರಕರಣವಾದರೆ ವಿಮೇ ಪಡೆಯುವುದು ಕಷ್ಟ, ಕೆ ಎಸ್ ಅರ್ ಟಿ ಸಿ ವತಿಯಿಂದ ವಿಮೆ ಪಡೆಯುವುದು ಸುಲಭವೆಂದು ಅವರು ಪ್ರಕರಣ ಸಲ್ಲಿಸಿದ್ದು, ನಾನು ಅವರಿಗೆ ಸಹಾಯ ಮಾಡಲು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)**

ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಮದ್ದೂರು.

ಸಾಕ್ಷಿ ಸಹಿಃ